# ಬಾವಲಿ ಹೂವು



■ ಬಿ.ಎಸ್.ವೆಂಕಟಾಚಲ ಭಟ್ಟ

ವಸಂತ ಋತುವಿನಲ್ಲಿ ಹಲವು ಬಗೆಯ ಹೂವುಗಳ ಸಡಗರ ಸಂಭ್ರಮ ಪ್ರಕೃತಿಯ ಸೊಬಗನ್ನು ಇಮ್ಮಡಿಗೊಳಿಸುತ್ತದೆ. ಒಂದೊಂದು ಹೂವೂ ನಾನು ಮೇಲೆ ತಾನು ಮೇಲೆ ಎನ್ನುತ್ತ ತಲೆಯೆತ್ತಿ ಮರದ ನೆತ್ತಿಯ ಮೇಲೆ ಹೂವಿನ ಕರಗ ಇಟ್ಟವರಂತೆ ಮಾಡುತ್ತಿರುತ್ತದೆ. ಇಂತಹ ಚೆಲುವನ್ನು ಬೆಂಗಳೂರಿನ ದಾರಿಗಳ ಇಕ್ಕೆಲಗಳಲ್ಲಿ ಮತ್ತು ಉದ್ಯಾನವನಗಳಲ್ಲಿ ಕಾಣಬಹುದು. ಹಾಗಾಗಿ ಬೆಂಗಳೂರಿನಲ್ಲಿ ಎಷ್ಟು ಬಗೆಯ ಹೂವು ಬಿಡುವ ಮರಗಳಿವೆ ಎನ್ನುವುದನ್ನು ನೆಟ್ಟಗೆ ನೋಡಿದರೆ ನೆಟ್ಟವರಿಗೂ ಗೊತ್ತಿರಲಿಕ್ಕಿಲ್ಲ.

ಅದೇನೇ ಇರಲಿ ಏಪ್ರಿಲ್–ಮೇ ತಿಂಗಳಿನಲ್ಲಿ ಸುಡುವ ಸೂರ್ಯನನ್ನು ಮುಟ್ಟಲು ಹಾತೊರೆಯುವ ಬಣ್ಣ ಬಣ್ಣದ ಹೂವಿನ ತೇರು ಒಂದೆಡೆಯಾದರೆ ಸೂರ್ಯನ ಸಹವಾಸವೇ ಬೇಡ ಎನ್ನುತ್ತಾ ನೆಲದತ್ತ ಜೋತು ಬೀಳುವ ಹೂವೂ ಇದೆ. ಆಫ್ರಿಕಾ ಮೂಲದ ಈ ಸುಂದರ ತೂಗು ಪುಷ್ಪ ಕನ್ನಡದ ನೆಲದಲ್ಲಿಯೂ ತನ್ನ ಚೆಲುವು ಚೆಲ್ಲುತ್ತಿದ್ದರೂ ಇದರ ಹೂವಿನ ಅಂದ ನೋಡಿ ಇದಕ್ಕೆ ಹೆಸರಿಟ್ಟಂತಿಲ್ಲ. ಬದಲಿಗೆ ಇದರ ಜೋತು ಬೀಳುವ ಉದ್ದುದ್ದ ಕಾಯಿಗಳನ್ನು ನೋಡಿ ಮರ ಸೌತೆ ಎನ್ನುವ ಹೆಸರನ್ನಿಟ್ಟಿದ್ದಾರೆ. ಆದರೆ ಈ ಆಕರ್ಷಕ ತೂಗು ಪುಷ್ಪ ಹಲವು ವಿಶಿಷ್ಟತೆಗಳಿಂದ ಗಮನ ಸೆಳೆಯುತ್ತದೆ.

ಇದು ರಾತ್ರಿ ಅರಳುವ ಹೂವು. ಮರದ ಕೊಂಬೆಯ ಕಾಂಡದಿಂದ ನೇರವಾಗಿ ಕೆಳಮುಖವಾಗಿ ಟಿಸಿಲೊಡೆಯುತ್ತ ಇಳಿಯುತ್ತದೆ. ಕೊಂಬೆಯ ಕಾಂಡದ ಬುಡದಲ್ಲಿ ಮೊಗ್ಗಾಗಿ ರಾತ್ರಿ ಹೊತ್ತು ರಕ್ತ ಕೆಂಪು ಬಣ್ಣದ ಹೂವಾಗುತ್ತದೆ. ದಿನ ಕಳೆದಂತೆ ಒಂದು ಹೂವು ಬಾಡಿ ಬೀಳುವಷ್ಟರಲ್ಲಿಯೇ ಹಗ್ಗ ಇಳಿಬಿಟ್ಟಂತೆ ಇನ್ನೊಂದು ಮೊಗ್ಗೊಡೆಯುತ್ತಾ ರಾತ್ರಿಯೇ ಹೂವಾಗುತ್ತಾ ನೆಲಕ್ಕೆ ಮುಖ ಮಾಡಿ ಸಾಗುತ್ತದೆ. ಹಸಿರು ತೊಟ್ಟಿನಿಂದ ಹೊರಹೊಮ್ಮುವ ಗಂಟೆಯಾಕಾರದ ಅಗಲ ಹೂವು ರಕ್ತ ಕೆಂಪು ಬಣ್ಣದಲ್ಲಿದ್ದರೆ ಅದರೊಳಗಿನ ಪುಂಕೇಸರಗಳು ಹಳದಿ ಬಣ್ಣದಲ್ಲಿರುತ್ತವೆ.



ಇದರ ದೊಡ್ಡ ಆಕಾರ, ಕೆಂಪು ಹಳದಿಯ ವರ್ಣ ಸಂಯೋಜನೆಗಳ ಜೊತೆ ಇದು ಹೊರಸೂಸುವ ಸುವಾಸನೆ ಮಕರಂದ ಹೀರಲು ಬರುವವರಿಂದ ಪರಕೀಯ ಪರಾಗ ಸ್ಪರ್ಶ ಕ್ರಿಯೆ ಮಾಡಿಸಿಕೊಳ್ಳಲು ಆಹ್ವಾನ ನೀಡುತ್ತವೆ.

ಹೇಳಿ ಕೇಳಿ ಇದು ರಾತ್ರಿ ಅರಳುವ ಹೂವು. ಸಾಧಾರಣವಾಗಿ ಹೂವಿಗೆ ಪರಕೀಯ ಪರಾಗ ಸ್ಪರ್ಶ ಮಾಡಿಸಲು ಬರುವ ಚಿಟ್ಟೆ, ದುಂಬಿ, ಕೆಲವು ಹಕ್ಕಿಗಳು, ಹುಳುಗಳೆಲ್ಲ ಸುತ್ತಾಡಿ ಹೂವಿಂದ ಹೂವಿಗೆ ಹಾರಿ ಮಕರಂದ ಹೀರಿ ಹಗಲು ರಮಿಸಿ ಸುಸ್ತಾಗಿ ರಾತ್ರಿ ವಿರಮಿಸುತ್ತವೆ. ಹೀಗಿರುವಾಗ ರಾತ್ರಿ ಅರಳಿ ನಿಲ್ಲುವ ಈ ತೂಗು ಪುಷ್ಪಕ್ಕೆ ಪರಾಗ ಸ್ಪರ್ಶ ಮಾಡಿಸಲು ಬರುವ ಅತಿಥಿಗಳಾದರೂ ಯಾರು?

ಅದು ಬಾವಲಿ ಎಂದರೆ ಆಶ್ಚರ್ಯವಾಗಬಹುದಲ್ಲವೆ! ಹಗಲು ಮರದಲ್ಲಿ ಜೋತುಕೊಂಡು ನಿದ್ರಿಸುತ್ತ ರಾತ್ರಿಯಾಗುತ್ತಿದ್ದಂತೆಯೇ ನಿಶಾಚರಿಯಾಗಿ ಸೂಕ್ಷ್ಮ ಧ್ವನಿ ತರಂಗಗಳನ್ನು ಗ್ರಹಿಸಿ ಸಂಚರಿಸುವ ವಿಶೇಷ ಸಾಮರ್ಥ್ಯವಿರುವ ಬಾವಲಿಗಳು ಈ ತೂಗು ಪುಷ್ಪ ಹೊರಸೂಸುವ ಸುವಾಸನೆಯಿಂದ ಆಕರ್ಷಿತವಾಗಿ ಮಕರಂದ ಹೀರಲು ಓಡೋಡಿ ಬರುತ್ತವೆ. ಮಕರಂದವನ್ನು ಸರಾಗವಾಗಿ ಹೀರುತ್ತಿರುವಂತೆಯೇ ಪರಾಗ ಸ್ಪರ್ಶವಾಗಿ ಹೂವಿಗೆ ಕಾಯಾಗುವ ಯೋಗ ಕೂಡಿ ಬರುತ್ತದೆ. ಚಿಗುರು ಕಾಯಿ ಬೆಳೆಯುತ್ತಾ ಬಲಿಯುವಷ್ಟರಲ್ಲಿ ಸುಮಾರು ಎರಡಡಿ ಉದ್ದವಾಗಿ ಹೂವಿದ್ದ ಜಾಗದಿಂದಲೇ ಜೋತು ಬೀಳುತ್ತದೆ. ಈ ಕಾಯಿ ಮಾನವರಿಗೆ ತಿನ್ನಲು ಯೋಗ್ಯವಲ್ಲದಿದ್ದರೂ ಕೆಲವು ಪ್ರಾಣಿಗಳಿಗೆ ಬಲು ಇಷ್ಟವಂತೆ. ಅದರಲ್ಲೂ ಮರದಡಿಯಲ್ಲೇ ಇದ್ದು ತನ್ನ ಉದ್ದವಾದ ಕತ್ತನ್ನು ಬಗ್ಗಿಸದೆ ಜೋತಾಡುವ ಕಾಯಿಗೆ ನೇರವಾಗಿ ಬಾಯಿ ಹಾಕಲು ಅನುಕೂಲವಿರುವ ಈ ಕಾಯಿ ಜಿರಾಫೆಗೆ ಅಚ್ಚುಮೆಚ್ಚಂತೆ!. ತಿನ್ನಲಾಗದಿದ್ದರೇನಂತೆ ಹಚ್ಚಲು ಅಡ್ಡಿಯಿಲ್ಲ ಎಂದು ಇತ್ತೀಚೆಗೆ ಈ ಕಾಯಿಯ ಔಷಧೀಯ ಗುಣದ ಅಂಶ ಸೌಂದರ್ಯವರ್ಧಕ ಕ್ರೀಮ್ ಮತ್ತು ಶ್ಯಾಂಪೂಗಳಿಗೆ ಬಳಕೆಯಾಗುತ್ತಿದೆಯಂತೆ.

ಒಟ್ಟಾರೆ ಬಿಗ್ನೋನಿಯೇಸಿ (bignoniaceae) ವಂಶಕ್ಕೆ ಸೇರಿ ಕಿಗೇಲಿಯಾ ಆಫ್ರಿಕಾನಾ ಎಂದು ಮೂಲ ಹೆಸರು ಹೊಂದಿರುವ ಈ ಹೂವಿನ ಮರ ತನ್ನ ಕಾಯಿಯ ರೂಪದಿಂದಾಗಿ ಸಾಸೇಜ್ ಮರ (sausage tree) ಎಂದು ಎಲ್ಲೆಡೆ ಕರೆಸಿಕೊಳ್ಳುತ್ತಿದೆ. ಜಗತ್ತಿನ ಹಲವು ಜಾತಿಯ ಮರಗಳು ಬೆಂಗಳೂರಿನ ಮಣ್ಣಿನ ಗುಣಕ್ಕೆ ಒಗ್ಗಿ ಹೋಗಿರುವಂತೆ ಈ ತೂಗು ಪುಷ್ಪ ಕೂಡ ಅಲಂಕಾರಕ್ಕಿರುವ ಮರಗಳಲ್ಲೊಂದಾಗಿದೆ. ಹಗಲು ಬಾವಲಿಯಂತೆ ಜೋತುಕೊಂಡು ರಾತ್ರಿ ಸುಂದರ ಹೂವರಳಿಸಿಕೊಂಡು ರಾತ್ರಿ ಬಾವಲಿಯ ಸಖ್ಯ ಬೆಳೆಸಿಕೊಂಡು ಸದ್ದಿಲ್ಲದೇ ಸಂತತಿ ಬೆಳೆಸಿಕೊಳ್ಳುತ್ತಿರುವ ಈ ಹೂವಿಗೆ ಕನ್ನಡದಲ್ಲಿ ಬಾವಲಿ–ಹೂವು ಎಂದು ಕರೆದರೂ ತಪ್ಪಿಲ್ಲ. ■